## ಅಧ್ಯಾಯ - ೪

# ಸಮಾರೋಪ

# ಅಧ್ಯಾಯ - 8

# ಸಮಾರೋಪ

ಕರ್ನಾಟಕದ ಪ್ರಾಚೀನ ಬುಡಕಟ್ಟುಗಳ್ಲಲಿ ಒಂದಾದ ಕಾಡುಗೊಲ್ಲರು ತಮ್ಮದೇ ಆದಂತಹ ಅನನ್ಯತೆಯನ್ನು ಹೊಂದಿದವರು. ನಾಗರಿಕ ಸಮಾಜದ ಲಕ್ಷಣಗಳನ್ನು ಮೈಗೂಡಿಸಿಕೊಳ್ಳಲು ತವಕಿಸುತ್ತಲೇ ತನ್ನ ಪಾರಂಪರಿಕ ಸಂಪ್ರದಾಯ, ನಡಾವಳಿಗಳನ್ನು ಕಾಯ್ದಿಟ್ಟುಕೊಳ್ಳಲು ಹೆಣಗುತ್ತಿರುವ ಸಮುದಾಯವಾಗಿದೆ. ಈ ಬುಡಕಟ್ಟಿನ ವಿಶಿಷ್ಟ ಬದುಕಿನಂತೆಯೇ ವೈವಿಧ್ಯಮಯವಾದ ಅಪಾರ ಜನಪದ ಸಾಹಿತ್ಯ ಭಂಡಾರವೇ ಇವರಲ್ಲಿ ಹುದುಗಿದೆ. ಕಾಡುಗೊಲ್ಲರ ಬದುಕೇ ಸಾಹಿತ್ಯವಾಗಿ ಪ್ರತಿಬಿಂಬಿತವಾಗಿದೆ.

ಕಾಡುಗೊಲ್ಲರನ್ನು ಕುರಿತಂತೆ ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ ಸಹ ಮತ್ತೆ ಮತ್ತೆ ಹೊಸ ಸೂಕ್ಷ್ಮ ಅಧ್ಯಯನಗಳಿಗೆ ಕಾಡುಗೊಲ್ಲರ ಸಂಸ್ಕೃತಿ ಮತ್ತು ಸಾಹಿತ್ಯ ತೆರೆದುಕೊಳ್ಳುತ್ತಲೇ ಇದೆ. ಹಾಗಾಗಿ **'ಕಾಡುಗೊಲ್ಲರ ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ಸಂಘರ್ಷ'** ಎಂಬ ನನ್ನ ಅಧ್ಯಯನವೂ ಹೊಸ ಸಂಗತಿಗಳನ್ನು ಅನಾವರಣಗೊಳಿಸುತ್ತದೆ. ಬುಡಕಟ್ಟಿನ ಸಂಸ್ಕೃತಿ, ಸಾಹಿತ್ಯದ ಆಳ ಬೇರುಗಳ ತಲಸ್ಪರ್ಶಿ ಚಿಕಿತ್ಸಕ ಚಿಂತನೆಗಳು ಜಾಗತೀಕರಣದ ಈ ಸಂದರ್ಭದಲ್ಲಿ ಅತ್ಯವಶ್ಯಕವಾಗಿ ಬೇಕಾಗಿವೆ. ಈ ದಿಕ್ಕಿನಲ್ಲಿ ಕಾಡುಗೊಲ್ಲರ ಬದುಕಿನ ಸಂಸ್ಕೃತಿಯ ಪ್ರತಿಬಿಂಬವಾಗಿ ಚಿತ್ರಿತಗೊಂಡಿರುವ ಅವರ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಶೌರ್ಯಸಾಹಸಗಳನ್ನು ಪರಿಶೀಲಿಸಲಾಗಿದೆ ಆರ್ಥಿಕ ಒಡಂಬಡಿಕೆಗಳು, ಸಾಮಾಜಿಕ ಧಾರ್ಮಿಕ ತಲ್ಲಣಗಳನ್ನು ಅವಲೋಕಿಸಲಾಗಿದೆ. ಕೌಟುಂಬಿಕ ಅವಘಡಗಳು ಹಾಗೂ ಸ್ತ್ರೀ ಕೇಂದ್ರಿತ ನಿಲುವುಗಳನ್ನು ಸಂಘರ್ಷದ ಚೌಕಟ್ಟಿನಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.

ಕಾಡಗೊಲ್ಲ ಬುಡಕಟ್ಟಿನ ಸಂಸ್ಕೃತಿ ಸಂಪ್ರದಾಯ ಮತ್ತು ಸಾಹಿತ್ಯ ಕುರಿತಂತೆ ಒಟ್ಟು ನಾಲ್ಕು ಪಿಎಚ್.ಡಿ ಅಧ್ಯಯನಗಳು ನಡೆದಿವೆ, ಇದಲ್ಲದೆ ಆನುಷಂಗಿಕವಾಗಿ 1888 ರಲ್ಲಿ ಎಫ್. ಫಾಸೆಟ್ ಅವರಿಂದ ಹಿಡಿದು ಇಲ್ಲಿಯವರಿಗೆ ಸುಮಾರು 38ಕ್ಕಿಂತಲೂ ಹೆಚ್ಚು ಜನ ವಿದ್ವಾಂಸರು, ಚಿಂತನಶೀಲರು ಈ ಬುಡಕಟ್ಟಿನ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಕೃತಿಗಳನ್ನು ಪ್ರಕಟಿಸಿದ್ದಾರೆ.

ಇದಲ್ಲದೆ ಹೊಸಗನ್ನಡ ಸೃಜನ ಸಾಹಿತ್ಯದಲ್ಲಿ ಕಾಡುಗೊಲ್ಲರ ಬದುಕು–ಬವಣೆಗಳು ಅನಾವರಣಗೊಂಡಿವೆ. ಈ ಎಲ್ಲಾ ಸಂಗತಿಗಳನ್ನು ವಿಸ್ತೃತವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಸಂಸ್ಕೃತಿಯನ್ನು ಕುರಿತಂತೆ ಪಾಶ್ಚಾತ್ಯ ಭಾರತೀಯ ಚಿಂತಕರು ತಮ್ಮದೇ ಆದ ಅನುಭವಗಳ ನೆಲೆಗಟ್ಟಿನಲ್ಲಿ ಅರ್ಥೈಸಿದ್ದಾರೆ, ವ್ಯಾಖ್ಯಾನಿಸಿದ್ದಾರೆ. ಅಂತಹ ಕೆಲವು ವ್ಯಾಖ್ಯಾನಗಳನ್ನು ಹಾಗೂ ಅರ್ಥಗ್ರಹಿಕೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಇದರೊಂದಿಗೆ ಇತ್ತೀಚಿನ ಸಂಸ್ಕೃತಿ ಪರಿಕಲ್ಪನೆಗೆ ಹೊಸ ಪರಿಭಾಷೆಯನ್ನು ರೂಪಿಸಿರುವ ಕನ್ನಡ ಸಂಸ್ಕೃತಿ ಚಿಂತಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ಚರ್ಚಿಸಲಾಗಿದೆ.

ಪ್ರತಿಯೊಂದು ಜನಾಂಗದ, ಬುಡಕಟ್ಟುಗಳ ಹೆಸರುಗಳಲ್ಲಿಯೇ ಆ ಸಮುದಾಯದ ಜೀವನ ಪರಿಕ್ರಮ ಹುದುಗಿರುತ್ತದೆ. ಈ ಹಿನ್ನೆಲೆಯಲಿ 'ಗೊಲ್ಲ' ಶಬ್ದ ನಿಷ್ಪತ್ತಿಯ ಬಗ್ಗೆ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಚರ್ಚಿಸಲಾಗಿದೆ. ಗೊಲ್ಲಶಬ್ಧ ನಿಷ್ಪತ್ತಿ ಬಗೆಗಿನ ವಿದ್ವಾಂಸರಲ್ಲಿದ್ದ ತೊಡಕುಗಳನ್ನು ನಿವಾರಿಸಲಾಗಿದೆ. ನನ್ನದೇ ಆದಂತಹ ಖಚಿತ ನಿಲುವುಗಳನ್ನು ಕಾವ್ಯೋಕ್ತ ನಿದರ್ಶಗಳ ಮೂಲಕ ಸ್ಪಷ್ಟ ನಿಲುವನ್ನು ತಾಳಲಾಗಿದೆ. ಪಶುಪಾಲಕ ಗೊಲ್ಲರ ಪ್ರಾಚೀನತೆಯನ್ನು 2500 ವರ್ಷಗಳ ಹಿಂದಿನ ವೇದಗಳ ಕಾಲದಿಂದಲೇ ಗುರುತಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಶಿವಕೋಟ್ಯಾಚಾರರ ವಡ್ಡಾರಾಧನೆಯಿಂದ ಹಿಡಿದು ಬೆಟ್ಟವರ್ಧನರಾಯ ಚರಿತೆಯವರೆಗಿನ ಹಲವಾರು ಸಾಹಿತ್ಯಕ ಕೃತಿಗಳನ್ನು ಹಾಗೂ ಶಾಸನೋಕ್ತ ಆಕರಗಳು ಮತ್ತು ಚಾರಿತ್ರಿಕ ಆಕರಗಳನ್ನು ಗೊಲ್ಲರ ಪ್ರಾಚೀನತೆಯನ್ನು ಗುರುತಿಸಲು ಹೆಕ್ಕಿ ತೋರಿಸಲಾಗಿದೆ.

ಕಾಡುಗೊಲ್ಲರ ಸಂಸ್ಕೃತಿಗೆ ಸಂಬಂಧಿಸಿದಂತೆ ಹಟ್ಟಿಯ ಸಂರಚನೆ, ಗುಡಿಕಟ್ಟು ಕಟ್ಟೆಮನೆಗಳು, ಬೆಡಗುಗಳು, ಅಚರಣೆ ಸಂಪ್ರದಾಯಗಳನ್ನು ವಿಸ್ತೃತವಾಗಿ ವಿಶ್ಲೇಷಿಸಲಾಗಿದೆ. ವಿಶ್ಲೇಷಣೆಯ ವಿಷಯ ಸ್ಪಷ್ಟೀಕರಣಕ್ಕಾಗಿ ಗೊಲ್ಲರ ಕಾವ್ಯದೊಳಗಿನ ಸಂದರ್ಭಗಳನ್ನು ಉದಾಹರಣೆಯೊಂದಿಗೆ ನೀಡಲಾಗಿದೆ. ಈ ಬುಡಕಟ್ಟಿನ ಸಂಪ್ರದಾಯ ಆಚರಣೆ ಕುರಿತು ಈ ಹಿಂದಿನ ಅಧ್ಯಯನಕಾರರು ಕೊಡಲಾದ ಅರ್ಥವಿವರಗಳನ್ನು ಪುನರ್‌ಪರಿಶೀಲನೆಗೆ ಒಳಪಡಿಸಲಾಗಿದೆ. ಇದರೊಂದಿಗೆ ಕಾಡುಗೊಲ್ಲರ ಕಾವ್ಯ ಪರಂಪರೆಯನ್ನು ವಿಶ್ಲೇಷಿಸಲಾಗಿದೆ. ಕಾಡಡವಿಯ ಗರ್ಭದೊಳಗೆ ಬದುಕುತ್ತಿದ್ದ ಗೊಲ್ಲರ ಬದುಕೇ ಕಾವ್ಯವಾಗಿ ಹೊರಹೊಮ್ಮಿರುವುದು ಸುಸ್ಪಷ್ಟ. ಗೊಲ್ಲರ ಯಾವುದೇ ಹಟ್ಟಿಗೆ ಹೋದರೂ ಅಲ್ಲಿ ಕಥೆಯನ್ನು

ಹೇಳುವ, ಪದಗಳನ್ನು ಹಾಡುವ, ಕಾಲಿಗೆ ಗೆಜ್ಜೆಕಟ್ಟಿಕೊಂಡು ಕೋಲು ಹೊಡೆದು ಕೇಕೆ ಹಾಕುವ ಹತ್ತಾರು ಕಲಾವಿದರನ್ನು ಕಾಣಬಹುದು.

ಜನಪದಸಾಹಿತ್ಯದ ದೃಷ್ಟಿಯಿಂದ ಗೊಲ್ಲರ ಒಂದೊಂದು ಹಟ್ಟಿಯೂ ಒಂದೊಂದು ಗಣಿಯಾಗಿದೆ ಎಂದರೆ ಅತಿಶಯೋಕ್ತಿ ಆಗಲಾರದು ಇಂಥವರು ತಲತಲಾಂತರವಾಗಿ ಒಂದು ಪರಂಪರೆಯ ಚೌಕಟ್ಟಿನಲ್ಲಿ ಹಾಡಿಕೊಂಡು ಬಂದಿರುವ ಪದ್ಯ ಸಾಹಿತ್ಯವನ್ನು

1. ಸೋಬಾನೆ ಪದಗಳು
2. ಕೋಲು ಪದಗಳು
3. ಗಗ್ಗರ ಪದಗಳು
4. ಈರಗಾರರ ಪದಗಳು
5. ಗಣೆ ಕಾವ್ಯಗಳು
6. ಮಹಾಕಾವ್ಯಗಳು

ಈ ರೀತಿಯಾಗಿ ಸ್ಥೂಲವಾಗಿ ವರ್ಗೀಕರಣ ಮಾಡಿಕೊಂಡು ವಿವರಣಾತ್ಮಕವಾಗಿ ಇಲ್ಲಿ ವಿಶ್ಲೇಷಿಸಲಾಗಿದೆ. ಇದಲ್ಲದೆ ನಾಡೋಜ ಸಿರಿಯಜ್ಜಿಯನ್ನು ಒಳಗೊಂಡಂತೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಹಾಗೂ ಮರಣ ಹೊಂದಿರುವ ಪ್ರಸಿದ್ಧ ಪದಗಾರರನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಲಾಗಿದೆ. ಸಾಮಾನ್ಯವಾಗಿ ಆಯಾ ಸಮುದಾಯಗಳ ಪದಗಾರರ ಲೋಕದೃಷ್ಟಿಯೇ ಕಾವ್ಯಗಳ ಲೋಕದೃಷ್ಟಿಯೂ ಅಗಿರುತ್ತದೆ. ಹಾಗಾಗಿ ಕಾಡುಗೊಲ್ಲ ಪದಗಾರರು ಪರಂಪರೆಯೊಂದಿಗೆ ಪ್ರಸಕ್ತ ಸಾಮಾಜಿಕ ಧಾರ್ಮಿಕ ಆರ್ಥಿಕ ರಾಜಕೀಯ ಸಂದರ್ಭಗಳನ್ನು ಮುಖಾಮುಖಿಯಾಗಿಸಿಕೊಂಡೇ ಕಾವ್ಯಗಳನ್ನು ಕಟ್ಟಿ ಕೊಟ್ಟಿರುತ್ತಾರೆ. ಈ ಎಲ್ಲಾ ಒಳಸುಳುಹುಗಳನ್ನು ಸಾಂದರ್ಭಿಕವಾಗಿ ಚರ್ಚೆಗೆ ಒಳಪಡಿಸಲಾಗಿದೆ.

ಸಂಘರ್ಷವು ಸಮಾಜಿಕ ಸಾಂಸ್ಕೃತಿಕ ಪ್ರತಿಕ್ರಿಯೆಗಳು ಹಾಗೂ ಮಾನವನ ಮನೋವ್ಯಾಪಾರದ ಒಳಸುಳಿಗಳ ಒಂದು ರೂಪವಾಗಿದೆ. ಜನರ ಅಭಿಪ್ರಾಯಗಳು ಆದರ್ಶಗಳು ಮೌಲ್ಯಗಳು ನಂಬಿಕೆಗಳು– ಮುಂತಾದವುಗಳಲ್ಲಿ ಕಂಡುಬರುವ ಭಿನ್ನತೆ–ವೈರುಧ್ಯಗಳು ತೀವ್ರವಾಗಿ ಪರಸ್ಪರ ವಿರೋಧಾತ್ಮಕವಾದಾಗ ತಿಕ್ಕಾಟಗಳು ಆರಂಭವಾಗುತ್ತವೆ. ಹಾಗೆಯೇ ಮಿತಿಮೀರಿದ ಸ್ಪರ್ಧೆಯೂ ಸಂಘರ್ಷದಲ್ಲಿ

ಪರ್ಯಾವಸಾನವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂಘರ್ಷವನ್ನು ಕುರಿತಂತೆ ಕೆಲವು ಸಿದ್ಧಾಂತಗಳು ರೂಪುಗೊಂಡಿವೆ. ಹರ್ಟನ್, ವೇಬರ್, ಸೀಮೆಲ್ ಮೊದಲಾದವರ ಸಂಘರ್ಷ ಸಿದ್ಧಾಂತವನ್ನು ಇಲ್ಲಿ ಚರ್ಚೆಗೆ ಕೈಗೆತ್ತಿಕೊಳ್ಳಲಾಗಿದೆ. ಇದರೊಂದಿಗೆ ಸಾಂಸ್ಕೃತಿಕ ಸಂಘರ್ಷಕ್ಕೆ ವ್ಯಕ್ತಿಯ 'ಮನೋವ್ಯಾಪಾರಗಳು' ಹೇಗೆ ಮುಖ್ಯವಾಗುತ್ತವೆ ಎಂಬುದಕ್ಕೆ ಡಾ|| ಎರಿಕ್ ಬರ್ನ್‌ನ ಈಗೋಸ್ಟೇಟ್ ಸಿದ್ಧಾಂತವನ್ನೂ ಸಹ ಇಲ್ಲಿ ವಿಶೇಷವಾಗಿ ವಿಶ್ಲೇಷಿಸಲಾಗಿದೆ.

ಆರ್ಯರಿಂದ ರೂಪಗೊಂಡ ವರ್ಣಾಶ್ರಮ ಧರ್ಮವ್ಯವಸ್ಥೆಯ ವಿರುದ್ಧ, ಶಿಷ್ಟ ಪರಂಪರೆಯಲ್ಲಿ ಕಾಲಕಾಲಕ್ಕೆ ಪ್ರತಿಭಟನೆಗಳು, ಪ್ರತಿರೋಧಗಳು, ಸಂಘರ್ಷಗಳು ಜರುಗತ್ತಲೇ ಬಂದಿವೆ. ಜನಪದರು ಇದಕ್ಕೆ ಹೊರತಾಗಿಲ್ಲ. ಊರುಹೊಕ್ಕರೆ ಸೂತಕವೆಂಬ ಮನಸ್ಥಿತಿಯಲ್ಲಿ, ಕಾಡಲ್ಲಿ ಬದುಕು ಸವೆಸಿದ ಕಾಡುಗೊಲ್ಲರಲ್ಲಿ ಧಾರ್ಮಿಕ ಆಚರಣೆಗಳು ಬಲು ಜಿಗುಟು ತನದಿಂದ ಕೂಡಿದವುಗಳಾಗಿವೆ. ಕುಲದ ಪಾವಿತ್ರಕ್ಕಾಗಿ ಜೀವವನ್ನೇ ಮುಡಿಪಿಡುವ ಈ ಸಮುದಾಯ ಇನ್ನೊಂದು ಮತಧರ್ಮದ ವಿರುದ್ಧ ತಾನಾಗಿಯೇ ಅಹಂ ನಿಷ್ಠೆಯಿಂದ ಆಕ್ರಮಣ ಮಾಡಿದ ನಿದರ್ಶನಗಳು ಕಂಡುಬಂದಿಲ್ಲ. ಆದರೆ ತನ್ನ ಪಾವಿತ್ರನಾಶಕ್ಕೆ ಧಕ್ಕೆ ಒದಗಿದಾಗ ನೇರಸಂಘರ್ಷಕ್ಕೆ ಇಳಿದಿದ್ದೂ ಇದೆ. ತಮ್ಮ ಸಾಂಸ್ಕೃತಿಕ ನಾಯಕರ ಮೂಲಕ ತನ್ನೆಲ್ಲ ಅಂತಃಶಕ್ತಿಯನ್ನೆ ತೋರಿಸಿಕೊಂಡಿದೆ.

ಉತ್ಪಾದನೆಯ ಪ್ರತಿಫಲವಾದ ಆದಾಯದಲ್ಲಿನ 'ಅತಿರಿಕ್ತಮೌಲ್ಯ'ವನ್ನು ಬಂಡವಾಳಶಾಹಿ ವರ್ಗ ತಾನೆ ಪಡೆದು ಕೊಳ್ಳುವುದರಿಂದ ಶ್ರಮಿಕರಲ್ಲಿ ವರ್ಗಪ್ರಜ್ಞೆ ಉದ್ಭವಿಸುತ್ತದೆ. ಕೊನೆಗೆ ಉಳ್ಳವರು–ಇಲ್ಲದವರ ನಡುವೆ ಸಂಘರ್ಷ ಏರ್ಪಡುತ್ತದೆ. ಆರ್ಥಿಕ ಸಂಪತ್ತಿನ ಕ್ರೂಡೀಕರಣ ಹಾಗೂ ಅನುಭೋಗ ಏಕಮುಖವಾದಾಗ ಇದನ್ನು ಹೇಗಾದರು ತಾವು ದಕ್ಕಿಸಿಕೊಳ್ಳಬೇಕಂಬ ಇಲ್ಲದವರ ಸಹಜ ಆಕಾಂಕ್ಷೆ, ಅಭೀಪ್ಸೆ ಮುಖಾಮುಖಿಯಾಗುತ್ತದೆ. ಸಂಘರ್ಷದ ಕಿಡಿ ಹೊತ್ತಿ ಉರಿಯಲಾರಂಭಿಸುತ್ತದೆ. ಕಾಡುಗೊಲ್ಲರ ಕಾವ್ಯಗಳಲ್ಲಿ ಉಧೃತವಾಗಿರುವ ಬಹುತೇಕ ವೀರರೆಲ್ಲರಿಗೂ ಪಶುಸಂಗೋಪನೆಯೇ ಮುಖ್ಯ ಗುರಿಯಾಗಿತ್ತು. ಇವರಿಗೆ ಕೃಷಿಯಾಧಾರಿತ ಭೂಮಿ ಇಲ್ಲದೆ ಇದ್ದುದರಿಂದ ತಮ್ಮ ಹಿಂಡು ಹಿಂಡು ದನಕರುಗಳ ಪೋಷಣೆಗಾಗಿ ಅನ್ಯರ ಹುಲ್ಲುಗಾವಲ್ಲನ್ನು ಆಶ್ರಯಿಸಬೇಕಾಗಿತ್ತು. ಉಳ್ಳಂತಹ ಬಲಿಷ್ಠ ಕೃಷಿಕರ ಹುಲ್ಲುಗಾವಲಿಗೆ 'ಹುಲ್ಲುಬನಿ' ಗಾಗಿಯೇ ಹೋರಾಟಗಳು ಸಂಭವಿಸಿವೆ. ಎತ್ತಪ್ಪ ಜುಂಜಪ್ಪ ಕಾವ್ಯಗಳಲ್ಲಿ

ಉದ್ದಕ್ಕೂ ಹಲ್ಲುಬನಿ ಹೋರಾಟಗಳೇ ತುಂಬಿಕೊಂಡಿವೆ. ಇಂತಹ ಹೋರಾಟಗಳನ್ನು ತಲ ಸ್ಪರ್ಷಿಯಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧಿಕಾರದ ಮತ್ತು ಸಂಪತ್ತಿನ ಕ್ರೂಢೀಕರಣದ ತಾಣಗಳಾದ ಅರಮನೆಗಳು, ಅದರೊಳಗಿನ ಅರಸೊತ್ತಿಗೆಯ ಅಹಂಕಾರಿಗಳು ಮತ್ತು ಊರುಗಳ ಜಮೀನ್ದಾರಿ ಪಟೇಲಗೌಡಾದಿಗಳನ್ನು ತಹಬಂಧಿಗೆ ತರುವ ಕೆಲಸವನ್ನು ಎತ್ತಪ್ಪ, ಜುಂಜಪ್ಪ ಮಾಡಿದ್ದಾರೆ. ಜೂಜು, ಯುದ್ಧಗಳಲ್ಲಿ ರಾಜರುಗಳನ್ನು ಸೋಲಿಸಿ ಕೆಲವುದಿನಗಳ ಕಾಲ ರಾಜ್ಯಾಡಳಿತ ನಡೆಸಿ ಬಡಜನರಿಗೆ ಕಂದಾಯ ರಿಯಾಯಿತಿ, ಸಾಮಾಜಿಕ ಗುಣಗೌರವ ನೀಡುವ ಜೀವಪರನಿಲುವಿನ ಸಂಘರ್ಷಪೂರಿತ ವರ್ಗಹೋರಾಟವನ್ನು ಎತ್ತಪ್ಪ ಜುಂಜಪ್ಪ ಕಾವ್ಯಗಳಲ್ಲಿ ಗುರುತಿಸಿ ವಿಶ್ಲೇಷಿಸಲಾಗಿದೆ. ಜುಂಜಪ್ಪ, ಸಂಘರ್ಷದ ಬದುಕಿನ ನಡುವೆಯೂ ಆತನ ಸಾಮಾಜಿಕ ಪ್ರಜ್ಞೆ ಹಾಗೂ ಸಾಂಸ್ಕೃತಿಕ ಹಿರಿಮೆ ಗರಿಮೆಗಳನ್ನು ಇಲ್ಲಿ ಸಾದ್ಯಾಂತವಾಗಿ ತೆರದಿಡಲಾಗಿದೆ.

ಗೊಲ್ಲರ ಕಾವ್ಯಗಳಲ್ಲಿ ಇತರೆ ಜಾತಿ ಬುಡಕಟ್ಟುಗಳೊಂದಿಗೆ ನಡೆಸಿದ ಸಂಘರ್ಷಾತ್ಮಕ ಚಿತ್ರಣಗಳು ಅಲ್ಲಲ್ಲಿ ಉಲ್ಲೇಖಿತ ಗೊಂಡಿವೆ. ಚಿತ್ತಯ್ಯ, ಪಾತಪ್ಪ, ಕ್ಯಾತಪ್ಪ, ಎತ್ತಪ್ಪ, ಜುಂಜಪ್ಪ ಮತ್ತು ಈರಗಾರರ ಕಥನಗಳಲ್ಲಿ ಕಂಡುಬರುವ ರೆಡ್ಡಿಗರು, ಉಪ್ಪಾರರು, ಕುರುಬರು, ಬೇಡರು, ತುರುಕರು, ಮೊದಲಾದವರೊಂದಿಗೆ ಗೊಲ್ಲವೀರರು ಕಾದಾಡಿದ್ದಾರೆ. ಶಾಪವಿತ್ತು ಸುಟ್ಟು ಹಾಕಿದ್ದಾರೆ. ಈ ಸನ್ನಿವೇಶಗಳಲ್ಲಿ ಮುಖ್ಯವಾಗಿ ಕಂಡುಬರುವುದು. ಉತ್ಪಾನಾ ನೆಲೆಗಟ್ಟಿನ ಆರ್ಥಿಕ ಸಂಗತಿಗಳು ಮತ್ತು ವ್ಯಕ್ತಿಗಳ ಅಸಹಜವರ್ತನೆಗಳು ಮಾತ್ರವಾಗಿರುತ್ತವೆ. ಈ ಸೂಕ್ಷ್ಮತೆಯನ್ನು ಪರಿಭಾವಿಸಿಕೊಂಡೇ ಗೊಲ್ಲರ ಕಾವ್ಯಗಳಲ್ಲಿ ಕಂಡುಬರುವ ಇತರೆ ಜಾತಿ ಬುಡಕಟ್ಟುಗಳ ನಡುವಿನ ಸಂಘರ್ಷಗಳನ್ನು ಇಲ್ಲಿ ಅರ್ಥೈಸಲಾಗಿದೆ.

ಸಮಾಜದ ಸಾಂಸ್ಕೃತಿಕ ನೆಲೆಗಟ್ಟಿನ ಸಂಘರ್ಷಕ್ಕೆ ಕುಂಟುಬ ಮೂಲ ಘಟಕವಾಗಿರುತ್ತದೆ. ಕುಂಟುಬ-ಕುಂಟುಬದೊಳಗಿನ ಒಳಬೆಡಗುಗಳು ಪ್ರಧಾನ ಪಾತ್ರ ವಹಿಸುತ್ತವೆ. ಜುಂಜಪ್ಪನ ಕಾವ್ಯದಲ್ಲಿ ಮಾರನೋರ ಬೆಡಗಿನ ಜುಂಜಪ್ಪ ಹಾಗೂ ಕಂಬೇರ ಬೆಡಗಿನ ದೊಡ್ಡಚಿನ್ನೇಗೌಡ ಇವರ ನಡುವಿನ ಕಲಹ-ವೈಷಮ್ಯಗಳು ಕಾವ್ಯದುದ್ದಕ್ಕೂ ಪ್ರತಿಫಲನ ಹೊಂದಿವೆ. ಈ ಇಬ್ಬರ ನಡುವಿನ ಚಾರಿತ್ರಿಕ ಆಂತರಿಕ ಕಲಹಗಳು ಮುಂದಿನ ತಲೆಮಾರುಗಳಿಗೆ ಸೈದ್ಧಾಂತಿಕ ಸಂಘರ್ಷವಾಗಿ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಯೂರುವ ಸಂಗತಿಗಳನ್ನು ಈ ಅಧ್ಯಯನದಲ್ಲಿ ಕೂಲಂಕಶವಾಗಿ ಚರ್ಚಿಸಲಾಗಿದೆ.

ಹೆಣ್ಣಿನ ವೈಧವ್ಯ ವಿಧಿಗಳಬಗ್ಗೆ ಅತ್ಯಂತ ಪ್ರಗತಿಪರ ಜೀವ ಸೆಲೆಯನ್ನು ಮೂಡಿಸುವ ಕಾಡುಗೊಲ್ಲರಲ್ಲಿ ಹೆಣ್ಣಿನ ಹುಟ್ಟು-ಮುಟ್ಟುಗಳ ಸಂದರ್ಭದಲ್ಲಿ ಕಠೋರ ನಿಲುವನ್ನು ತಳೆಯುತ್ತದೆ. ಇವರ ಕಾವ್ಯದೊಳಗಿನ ಹೆಣ್ಣುಗಳು ಪುರುಷಾಧೀನ ರಾಗಿಯೇ ಬದುಕು ಸವೆಸಿದವರಾಗಿದ್ದಾರೆ.

ಎತ್ತಪ್ಪ ತನ್ನ ಹೆಂಡತಿಯಬಗ್ಗೆ ನಿರಾಸಕ್ತಿಯನ್ನು ಹೊಂದುವುದರ ಜೊತೆಗೆ ಆಕೆಯನ್ನು ಮೈಲಿಗೆ ಎಂಬಂತೆ ಪರಿಭಾವಿಸುತ್ತಾನೆ. ಜುಂಜಪ್ಪ ತನ್ನ ತಾಯಿಯನ್ನೇ 'ಶೀಲಪರೀಕ್ಷೆಗೆ' ಒಳಪಡಿಸುತ್ತಾನೆ. ಚಿತ್ತಯ್ಯ ತನ್ನ ಹೆಂಡತಿ ಗಂಗಿ ಮಾಳಮ್ಮಳನ್ನು ತನ್ನೆಲ್ಲ ದಂಡುದಳದ ಎದುರಿನಲ್ಲೇ ಅವಮಾನಿಸುತ್ತಾನೆ. ಇಂಥ ಅನೇಕ ಪುರುಷ ಪ್ರಾಬಲ್ಯದ ದೌರ್ಜನ್ಯದ ದುರಂತ ಚಿತ್ರಣಗಳನ್ನು ಅಧ್ಯಯನದಲ್ಲಿ ವಸ್ತುನಿಷ್ಠವಾಗಿ ಚಿತ್ರಿಸಲಾಗಿದೆ. ಸತಿ ಪದ್ಧತಿಯ ಕಾರ್ಯ ವ್ಯವಸ್ಥೆಯನ್ನು ಪದರು ಪದರಾಗಿ ಬಿಚ್ಚಿ ಅರುಹಲಾಗಿದೆ.

ಜಾಗತೀಕರಣದ ಪ್ರಸ್ತುತ ಸಂದರ್ಭದಲ್ಲಿ ಈ ಬುಡಕಟ್ಟು ಅನೇಕ ರೀತಿಯ ಸಾಮಾಜಿಕ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿ ಸ್ಥಿತ್ಯಂತರಕ್ಕೆ ಒಳಗಾಗಿದೆ. ಆಧುನಿಕ ಬದುಕಿನ ಮುಖ್ಯ ವಾಹಿನಿಯೊಂದಿಗೆ ಬೆರೆತುಕೊಳ್ಳಲು ಪ್ರಯತ್ನಿಸುತ್ತಿದೆ. ಪರಿವರ್ತನೆಯ ಸ್ಥಿತ್ಯಂತರದ ಹಾದಿಯಲ್ಲಿ ತನ್ನ ಪ್ರಾಚೀನ ಪರಂಪರೆಯ ಹಾಗೂ ಸಂಪ್ರದಾಯಗಳಿಗೆ ಹೊಸ ಆವಿಷ್ಕಾರವನ್ನು ಕಂಡುಕೊಳ್ಳವುದರ ಜೊತೆಯಲ್ಲೇ ಅನನ್ಯತೆಯನ್ನೂ ಉಳಿಸಿಕೊಳ್ಳವತ್ತ ದೃಢನಿಲುವು ತಳೆದಿರುವ ಸಂಗತಿಗಳನ್ನು ವಿವೇಚಿಸಲಾಗಿದೆ.

**ಅಧ್ಯಯನದ ಉಪಯೋಗಗಳು**

ಪ್ರಸ್ತುತ ಅಧ್ಯಯನಕ್ಕೆ ಅಂತರ್‌ಶಿಸ್ತೀಯ ಕ್ರಮವನ್ನು ಅನುಸರಿಸಲಾಗಿದೆ. ತತ್ಫಲವಾಗಿ ಅನ್ಯಶಿಸ್ತುಗಳ ತಜ್ಞರಿಗೆ, ಚಿಂತಕರಿಗೆ, ಈ ಅಧ್ಯಯನದಲ್ಲಿ ವಿಫುಲವಾದ ಸಾಮಗ್ರಿಗಳು ಲಭ್ಯವಾಗುತ್ತವೆ, ಉಪಯುಕ್ತ ಮಾಹಿತಿಯನ್ನು ಒದಗಿಸುತ್ತವೆ. ಗೊಲ್ಲ ಬುಡಕಟ್ಟನ್ನು ಇತಿಹಾಸದ ದೃಷ್ಟಿಕೋನದಿಂದ ನೋಡಲಾಗಿದೆ. ಚರಿತ್ರೆಯಲ್ಲಿ ಗೊಲ್ಲರ ಸ್ಥಾನಮಾನವನ್ನು ಕುರಿತಂತೆ ಪ್ರಸ್ತಾಪಿಸಲಾಗಿದೆ. ಪ್ರಾಚೀನ ಆಕರಗಳನ್ನು ನಿದರ್ಶನಾತ್ಮಕವಾಗಿ ಕೈಗೆತ್ತಿಕೊಳ್ಳಲಾಗಿದೆ. ಚಾರಿತ್ರಿಕ ಘಟನೆಗಳನ್ನು ಹೆಕ್ಕಿ ತೆಗೆಯಲಾಗಿದೆ. ಹಾಗಾಗಿ ಇತಿಹಾಸಕಾರರಿಗೆ ಈ ಸಮುದಾಯದ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿ ಕೊಡುವುದಕ್ಕೆ ಈ ಅಧ್ಯಯನದ ವಿವರಗಳು ಸಹಕಾರಿಯಾಗುತ್ತವೆ.

ಗೊಲ್ಲ ಬುಡಕಟ್ಟಿನ ಸಂಪ್ರದಾಯ, ಅಚರಣೆಗಳನ್ನೊಳಗೊಂಡಂತೆ ಸಾಮಾಜಿಕ ಸ್ಥಿರವಿನ್ಯಾಸಗಳನ್ನು ವಿವೇಚಿಸ ಲಾಗಿದೆ. ಇದರೊಂದಿಗೆ ಸಮುದಾಯದ ಸಾಮಾಜಿಕ ಚಲನೆ ಮತ್ತು ಸ್ಥಿತ್ಯಂತರಗಳನ್ನು ಸಮಾಜ ಶಾಸ್ತ್ರೀಯ ದೃಷ್ಟಿಕೋನದಿಂದ ನೋಡಲಾಗಿದೆ. ಆದ್ದರಿಂದ ಸಮಾಜ ವಿಜ್ಞಾನಿಗಳಿಗೆ ಈ ಅಧ್ಯಯನದಲ್ಲಿ ಅನೇಕ ಸಾಮಾಜಿಕ ಅಂಶಗಳು ಲಭ್ಯವಾಗುತ್ತವೆ.

ಈ ಬುಡಕಟ್ಟಿನ ಅಧ್ಯಯನದಲ್ಲಿ ಉತ್ಪಾದನಾ ಆರ್ಥಿಕ ಒಳನೋಟಗಳು ಇರುವುದರಿಂದ ಅರ್ಥಶಾಸ್ತ್ರಜ್ಞರಿಗೆ, ರಾಜಕೀಯ ಒಳಸುಳಿಗಳು ಇಣುಕಿರುವುದರಿಂದ ರಾಜ್ಯಶಾಸ್ತ್ರಜ್ಞರಿಗೆ ಹೆಚ್ಚು ಉಪಯುಕ್ತವಾಗುವ ಸಾಧ್ಯತೆ ಇದೆ. ಕಾವ್ಯದೊಳಗಿನ ಪ್ರತಿಯೊಂದು ಪಾತ್ರಗಳು ಯಾವಯಾವ ಸಂದರ್ಭದಲ್ಲಿ ಹೇಗೆ ವರ್ತಿಸಿದರು? ಯಾವ ಕಾರಣಕ್ಕೆ ಹಾಗೆ ವರ್ತಿಸಿದರು? ಅಂತಹ ವರ್ತನೆಗಳಿಗೆ ಮೂಲಾಂಶಗಳೇನು? ಎಂಬ ಸಂಗತಿಯನ್ನು ಮನೋವಿಜ್ಞಾನದ ನೆಲೆಗಟ್ಟಿನಲ್ಲಿ ಚರ್ಚಿಸಲಾಗಿದೆ. ಇದರಿಂದಾಗಿ ಕಾರ್ಯಕಾರಣಗಳ ಫಲಿತಗಳ ಸೂಕ್ಷ್ಮ ಸಂವೇದನೆಗಳು ಅಂತರ್ಗತವಾಗಿ ಅರ್ಥವಾಗುತ್ತವೆ. ಈ ಹಿನ್ನೆಲೆಯಲ್ಲಿ ಮನೋವಿಜ್ಞಾನಿಗಳಿಗೆ ವಿಶೇಷವಾಗಿ ವರ್ತನಾ ಮನಶ್ಶಾಸ್ತ್ರಜ್ಞರಿಗೆ ವಿಫುಲವಾಗಿ ವಸ್ತುವಿವರಗಳು ಈ ಅಧ್ಯಯನದಲ್ಲಿ ಲಭ್ಯವಾಗುತ್ತವೆ.

ಕಾಡುಗೊಲ್ಲರ ಭಾಷೆ ಅಚ್ಚಕನ್ನಡ. ಇವರು ಕಾವ್ಯಕಥನಗಳಲ್ಲಿ ಬಳಸಲಾಗಿರುವ ಭಾಷೆಯ ಸೊಗಡನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಲು ಭಾಷಾವಿಜ್ಞಾನಿಗಳಿಗೆ ಮತ್ತು ಕಾವ್ಯಮೀಮಾಂಸಕರಿಗೆ ಹೆಚ್ಚಿನ ಸಾಮಗ್ರಿಯನ್ನು ಈ ಅಧ್ಯಯನ ಒದಗಿಸುತ್ತದೆ.

**ಕಂಡುಕೊಂಡ ಹೊಸಫಲಿತಗಳು:**

'ಕಾಡುಗೊಲ್ಲರ ಕಾವ್ಯಗಳಲ್ಲಿ ಸಾಂಸ್ಕೃತಿಕ ಸಂಘರ್ಷ' ಎಂಬ ಈ ನನ್ನ ಅಧ್ಯಯನದಲ್ಲಿ ಅನೇಕ ಹೊಸಹೊಳಹು ಗಳನ್ನು ಕಂಡುಕೊಳ್ಳಲಾಗಿದೆ. ಅನೇಕ ಸಂಗತಿಗಳು ಪ್ರಥಮವಾಗಿ ಇಲ್ಲಿ ಬೆಳಕು ಕಂಡಿವೆ. ಅಂಥವುಗಳನ್ನು ಅನುಕ್ರಮವಾಗಿ ಹೀಗೆ ಪರಿಭಾವಿಸಬಹುದಾಗಿದೆ.

1) ಪಶುಪಾಲಕ ಗೊಲ್ಲರ ಇತಿಹಾಸ 2500 ವರ್ಷಗಳ ಹಿಂದಿನ ವೇದಗಳ ಕಾಲದಿಂದಲೇ ಆರಂಭವಾಗುತ್ತದೆ. ಸಂಸ್ಕೃತದ ಭಾಗವತ ಪುರಾಣಗಳು, ಬೌದ್ಧಜಾತಕಗಳು, ಮನುಧರ್ಮಸೂತ್ರ, ಕೌಟಿಲ್ಯನ ಅರ್ಥಶಾಸ್ತ್ರ, ಗುಣಭದ್ರಾಚಾರ್ಯನ ಮಹಾಪುರಾಣ ಮುಂತಾದ

ಕೃತಿಗಳಲ್ಲಿ ಗೊಲ್ಲರ ಬಗೆಗಿನ ಉಲ್ಲೇಖಗಳನ್ನು ಶೋಧಿಸಲಾಗಿದೆ. ಇದಲ್ಲದೆ ಕನ್ನಡ ಸಾಹಿತ್ಯದಲ್ಲಿ ಶಿವಕೋಟ್ಯಾಚಾರ್ಯನ **(ಕ್ರಿ.ಶ.920)** ವಡ್ಡಾರಾಧನೆಯಿಂದ ಹಿಡಿದು ಚಂದ್ರಸಾಗರವರ್ಣಿಯ **(ಕ್ರಿ.ಶ.1800)** ಬೆಟ್ಟವರ್ಧನರಾಯಚರಿತೆಯವರೆಗೆ 48 ಪ್ರಾಚೀನ ಕೃತಿಗಳಲ್ಲಿ ಗೊಲ್ಲರ ಬಗೆಗಿನ ಉಲ್ಲೇಖಗಳನ್ನು ಹೆಕ್ಕಿತೆಗೆಯಲಾಗಿದೆ. ಇದಲ್ಲದೆ 14 ಶಾಸನಗಳಲ್ಲಿ 06 ಕೈಫಿಯತ್ತುಗಳಲ್ಲಿ ಗೊಲ್ಲರ ಬಗೆಗಿನ ವಿವರಗಳನ್ನು ಪತ್ತೆಹಚ್ಚಲಾಗಿದೆ.

2) ಆಧುನಿಕ ಕನ್ನಡ ಸೃಜನಸಾಹಿತ್ಯದಲ್ಲಿ ಗೊಲ್ಲ ಸಮುದಾಯ ಅನಾವರಣಗೊಂಡಿರುವುದನ್ನು ಪರಿಶೀಲಿಸಲಾಗಿದೆ.

3) ಸಂಘರ್ಷದ ಅರ್ಥಗ್ರಹಿಕೆ ಮತ್ತು ಸ್ವರೂಪವನ್ನು ಕುರಿತಂತೆ ತಾತ್ವಿಕ ಚೌಕಟ್ಟಿನಲ್ಲಿ ವಿಶೇಷವಾಗಿ ಚರ್ಚಿಸಲಾಗಿದೆ.

4) ಕಾಡುಗೊಲ್ಲರ ಕಾವ್ಯ ಪರಂಪರೆಯನ್ನು ಆಮೂಲಾಗ್ರವಾಗಿ ವಿಶ್ಲೇಷಿಸಲಾಗಿದ್ದು, ಅದಕ್ಕೆ ಮೂಲಕಾರಣ ಕರ್ತರಾದ ಪ್ರಸಿದ್ಧ ಪದಗಾರರನ್ನು ಸ್ಥೂಲವಾಗಿ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

5) ಕಾಡುಗೊಲ್ಲರ ಕಾವ್ಯಗಳಲ್ಲಿ ಕಂಡುಬರುವ ಸಂಘರ್ಷದ ನೆಲೆಗಳಾದ ಧರ್ಮ, ವರ್ಗ, ಲಿಂಗತಾರತಮ್ಯ, ಒಳಬೇಡಗುಗಳು, ಇತರೆಜಾತಿ–ಬುಡಕಟ್ಟುಗಳು ಮುಂತಾದುವುದಳನ್ನು ಆಳವಾಗಿ, ವಿಸ್ತೃತವಾಗಿ ಗುರುತಿಸಲಾಗಿದೆ.

6) ಕಾಡುಗೊಲ್ಲರ ಸ್ಥಿತ್ಯಂತರದ ಚಲನಾ ಪ್ರಕ್ರಿಯೆಗಳನ್ನು ವಿಶೇಷವಾಗಿ ಗುರುತಿಸಲಾಗಿದ್ದು, **'ಯಾದವೀಕರಣ'** ಎಂಬ ಹೊಸ ಪರಿಕಲ್ಪನೆಯನ್ನು ಗುರುತಿಸಲಾಗಿದೆ.

7) ಕಾಡುಗೊಲ್ಲರು ದೆಹಲಿ ಮೂಲದಿಂದ ಬಂದವರೆಂಬ ಪ್ರಬಲ ಐತಿಹ್ಯ ನಂಬಿಕೆಯನ್ನು ಹೋಗಲಾಡಿಸಿ ಇವರು ಮೂಲತಃ ಕನ್ನಡಿಗರು, ಕನ್ನಡ ನೆಲಮೂಲದವರೆಂದು ಆಧಾರಸಹಿತ ಪ್ರತಿಪಾದಿಸಲಾಗಿದೆ.

8) ಅಧ್ಯಯನಕ್ಕೆ ಪೂರಕವಾಗಿ ಕ್ಷೇತ್ರಕಾರ್ಯನಡೆಸಿ 260 ಗಂಟೆಗಳ ಅವಧಿಯ (90 ಕ್ಯಾಸೆಟ್‌ಗಳು) ಧ್ವನಿಮುದ್ರಿಕೆಯನ್ನು ಮಾಡಲಾಗಿದೆ. **'ಚಿತ್ತಯ್ಯ'**ನ ಬಗ್ಗೆ ಪೂರ್ಣಪ್ರಮಾಣದ ಕಾವ್ಯಲಭ್ಯವಿರಲಿಲ್ಲ. ಈ ಅಧ್ಯಯನದ ಹಿನ್ನೆಲೆಯಲ್ಲಿ ಪೂರ್ಣ ಪ್ರಮಾಣದ ಕಾವ್ಯವನ್ನು ಸಂಗ್ರಹಿಸಲಾಗಿದೆ. ಇದಲ್ಲದೆ ಕ್ಯಾತಪ್ಪ, ಪಾತಪ್ಪ, ಕಾವ್ಯಗಳನ್ನು ಭಿನ್ನ ವಕ್ತೃಗಳಿಂದ ಸಂಗ್ರಹಿಸಿ ಧ್ವನಿ ಮುದ್ರಿಸಿಕೊಳ್ಳಲಾಗಿದೆ. ಮುಂದಿನ ಹಂತದಲ್ಲಿ ಅವುಗಳನ್ನು ಲಿಪೀಕರಿಸಿ ಪ್ರಕಟಿಸಿದಾಗ ಜನಪದ ಮಹಾಕಾವ್ಯಮಾಲಿಕೆಗೆ ಮತ್ತೆ ಮೂರು ಮಹಾಕಾವ್ಯಗಳು ಸೇರ್ಪಡೆ ಆಗಲಿವೆ.

**ಮುಂದಿನ ಸಂಶೋಧಕರಿಗೆ ಪೂರಕ ವಿಷಯಗಳು:**

ಕಾಡುಗೊಲ್ಲರನ್ನು ಕುರಿತು ಮುಂದೆ ಅಧ್ಯಯನ ಮಾಡುವ ಸಂಶೋಧಕರಿಗೆ ಲಭ್ಯವಾಗಬಹುದಾದ ವಿಷಯಗಳ ಬಗ್ಗೆ ಇಲ್ಲಿ ಕ್ಷ-ಕಿರಣ ಬೀರಲಾಗಿದೆ.

1) ಕಾಡುಗೊಲ್ಲರ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಮಹಿಳೆಯ ಸ್ಥಾನಮಾನ ಕುರಿತಂತೆ ಅಧ್ಯಯನದ ಅಗತ್ಯವಿದೆ.

2) ಈಗಾಗಲೇ ಎತ್ತಪ್ಪ ಮತ್ತು ಜುಂಜಪ್ಪನವರನ್ನು ಕುರಿತಂತೆ ನಡೆಸಲಾಗಿರುವ ಅಧ್ಯಯನ ಮಾದರಿಯಲ್ಲಿ ಪಾತಪ್ಪ, ಕ್ಯಾತಪ್ಪ, ಚಿತ್ತಯ್ಯ-ಕಾಟಣ್ಣ ಇವರ ಬಗ್ಗೆ ಪ್ರತ್ಯೇಕವಾಗಿ ಸಮಗ್ರ ಅಧ್ಯಯನ ಮಾಡಬಹುದಾಗಿದೆ.

3) ಅಳಿವಿನ ಅಂಚಿನಲ್ಲಿರುವ ಕಟ್ಟೆಮನೆಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದು.

4) ಕಾಡುಗೊಲ್ಲರಲ್ಲಿ 'ಈರಗಾರ'ರ ದೊಡ್ಡ ಪರಂಪರೆಯೇ ಇದೆ. ಅವರನ್ನು ಸಮಗ್ರ ಅಧ್ಯಯನ ವ್ಯಾಪ್ತಿಗೆ ತರಬಹುದಾಗಿದೆ.

5) ಗೊಲ್ಲ ಸಮುದಾಯಕ್ಕೆ ಚೇತನರೂಪಿಯಾಗಿರುವ ಜನಪದ ಕಲಾವಿದೆ ನಾಡೋಜ ಸಿರಿಯಜ್ಜಿಯ ಬದುಕು ಮತ್ತು ಆಕೆಯ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು ಸೂಕ್ಷ್ಮ ಅಧ್ಯಯನ ನಡೆಸಲು ಅವಕಾಶವಿದೆ.

6) ಗೊಲ್ಲರ ಬೆಡಗುಗಳು, ವ್ಯಕ್ತಿಗಳ ಹೆಸರುಗಳು ಹಾಗೂ ಅವರಾಡುವ ಭಾಷೆಯ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಭಾಷಾಶಾಸ್ತ್ರದ ದೃಷ್ಟಿಕೋನದಿಂದ ಅಧ್ಯಯನಕ್ಕೆ ಹಲವುದಾರಿಗಳಿವೆ.

7) ಕಾಡುಗೊಲ್ಲರ ಕಾವ್ಯಗಳನ್ನು ಸಾಹಿತ್ಯಕವಾಗಿ ಮತ್ತು ಕಾವ್ಯಮೀಮಾಸೆಯ ದೃಷ್ಟಿಕೋನದಲ್ಲಿಯೂ ನೋಡಬಹುದು

8) ಗೊಲ್ಲರ ಮತ್ತೊಂದು ಬಣವಾದ 'ಊರುಗೊಲ್ಲ'ರ ಬಗ್ಗೆ ಕನ್ನಡದಲ್ಲಿ ಯಾವುದೇ ರೀತಿಯ ಅಧ್ಯಯನಗಳು ನಡೆದಿರುವುದಿಲ್ಲ. ಹಾಗಾಗಿ ಕಾಡುಗೊಲ್ಲರು ಮತ್ತು ಊರುಗೊಲ್ಲರ ಬಗ್ಗೆ ತೌಲನಿಕವಾಗಿ ಅಧ್ಯಯನ ಮಾಡಲು ಅವಕಾಶವಿರುತ್ತದೆ.

9) ಕಾಡುಗೊಲ್ಲರ ಸಾಮಾಜಿಕ ಚಲನೆ ಮತ್ತು ಪರಿವರ್ತನೆ ಹಾಗೂ ಸ್ಥಿತ್ಯಂತರಗಳನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ವಿಶೇಷವಾಗಿ ಸಂಶೋಧಿಸಬಹುದು.

## ಗೊಲ್ಲಬುಡಕಟ್ಟಿನ ಅಭಿವೃದ್ಧಿಗೆ ಕೆಲವು ಸಲಹೆಗಳು

1) ಎಲ್ಲಾ ರೀತಿಯ ಅಭಿವೃದ್ಧಿಗೆ ಶಿಕ್ಷಣ ಮೂಲಮಂತ್ರ. ಹಾಗಾಗಿ ಪ್ರತೀ ಗೊಲ್ಲರಹಟ್ಟಿಗಳನ್ನು ವಿಶೇಷ ಘಟಕವನ್ನಾಗಿ ರೂಪಿಸಿಕೊಂಡು ಕಡ್ಡಾಯವಾಗಿ ಮಕ್ಕಳಿಗೆ ಶಿಕ್ಷಣವನ್ನು ನೀಡುವುದು. ಉನ್ನತ ಶಿಕ್ಷಣದಲ್ಲಿರುವ ಗುಣಾತ್ಮಕ ಸ್ಪರ್ಧೆಗೆ ವಿಶೇಷ ಕೌಶಲ್ಯ ಸಂಪಾದನೆ ಅತಿಮುಖ್ಯವಾಗಿದೆ. ಇದರಿಂದಾಗಿ ಜಾಗತೀಕರಣದ ಔದ್ಯೋಗಿಕ ವಲಯಕ್ಕೆ ಪ್ರವೇಶ ಸುಗಮವಾದೀತು.

2) ಮೀಸಲಾತಿ ಪ್ರವರ್ಗ-1 ರಿಂದ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಲು ಸರ್ಕಾರದ ಮೇಲೆ ಸಾಂಘಿಕವಾಗಿ ಒತ್ತಡ ತರುವುದು.

3) ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದು.

4) ಸರ್ಕಾರದ ವಿಶೇಷ ಧನಸಹಾಯ ಯೋಜನೆಯಲ್ಲಿ ಕಾಡುಗೊಲ್ಲರಿಗಾಗಿ ಒಂದು ಪ್ರತ್ಯೇಕ ಅಭಿವೃದ್ಧಿ, ಪ್ರಾಧಿಕಾರವನ್ನು ರೂಪಿಸುವುದು.

5) ಈಗಾಗಲೇ ಮನೆಮಾಡಿಕೊಂಡಿರುವ ಸಾಂಪ್ರದಾಯಿಕ ಕೆಲವು ಮೌಢ್ಯಾಚರಣೆಗಳನ್ನು ಕೈಬಿಡುವಂತೆ ಸಮುದಾಯಕ್ಕೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮೇಲಿಂದ ಮೇಲೆ ಹಮ್ಮಿಕೊಳ್ಳುವುದು.

6) ಜನಾಂಗದ ಸಾಮಾಜಿಕ ಆರ್ಥಿಕ ಸರ್ವೇಕ್ಷಣೆಯನ್ನು ಪರಿಣತರಿಂದ ಮಾಡಿಸುವುದು.

7) ಜನಾಂಗದ ಸಾಂಸ್ಕೃತಿಕ ಸಂಪತ್ತಾದ ಗೊಲ್ಲರ ಜನಪದ ಸಾಹಿತ್ಯವನ್ನು ಸಮಗ್ರವಾಗಿ ಸಂಗ್ರಹಿಸಿ ಪ್ರಕಟಿಸುವುದು.

8) ಜನಾಂಗದ ಸಾಂಪ್ರದಾಯಿಕ ಕುಲಕಸುಬಾದ ಪಶುಪಾಲನೆಯನ್ನು ಆಧುನಿಕ ಮಾದರಿಯಲ್ಲಿ ಉತ್ತೇಜಿಸುವುದು. ಪ್ರತೀ ಹಟ್ಟಿಗೆ ಗೋಮಾಳನಿರ್ಮಿಸಿ ಹುಲ್ಲುಗಾವಲುಗಳನ್ನು ಬೆಳೆಸುವುದು.

9) ವಸತಿ ಇಲ್ಲದವರಿಗೆ ವಸತಿ ಸೌಕರ್ಯಗಳನ್ನು ಒದಗಿಸುವುದು.

ಇನ್ನೂ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಕೈಗೆತ್ತಿಕೊಳ್ಳಬೇಕು. ಸರಕಾರದೊಂದಿಗೆ ಸಮುದಾಯದ ಸಂಘ ಸಂಸ್ಥೆಗಳು ಕೈಜೋಡಿಸಿ ಇಡೀಬುಡಕಟ್ಟನ್ನು **'ಅಭಿವೃದ್ಧಿ ಮೀಮಾಂಸೆ'**ಯ ಪರಿಧಿಯೊಳಗೆ ಕೊಂಡೊಯ್ಯಲು ಮನಸಾ ಪ್ರಯತ್ನ ಪಡುವುದು ಇಂದಿನ ಸಂದರ್ಭಕ್ಕೆ ಅತ್ಯಗತ್ಯವಾಗಿದೆ. **ಶೈಕ್ಷಣಿಕ ಪ್ರಗತಿಯ ಮೂಲಕ ಆರ್ಥಿಕ ಸಬಲತೆ ಆಧುನಿಕತೆಗೆ ಬೆಳಕಿಂಡಿಯಾಗಬಲ್ಲದು ಮತ್ತು ಅಭಿವೃದ್ಧಿಗೆ ನಡೆಗೋಲಾಗುವುದು.**